ISSN 2321 - 3590

ಕನ್ನಡದ ಏಕೈಕ ಇತಿಹಾಸ ಸಂಶೋಧನ ತ್ರೈಮಾಸಿಕ ನಿಯತಕಾಲಿಕೆ

UGC CARE LIST JOURNAL IN KANNADA

# ಇತಿಹಾಸ ದರ್ಪಣ

(ತ್ರೈಮಾಸಿಕ)

A Peer Reviewed Journal of
Historical Research in Kannada



ಇತಿಹಾಸ ದರ್ಪಣ
(ತ್ರೈಮಾಸಿಕ)

**ಪುಸ್ತಕ ೪೪-೪೫**

ಜನವರಿ-ಜೂನ್ ೨೦೨೦
(ಸಂಯುಕ್ತ ಸಂಚಿಕೆ)

**ಸಂಪಾದಕರು, ಇತಿಹಾಸ ದರ್ಪಣ**
# ೩೩/ಎ, ಐ.ಟಿ.ಐ. ಕಾಲೇಜು ಹತ್ತಿರ
ಕೆಂಪೇಗೌಡನಗರ, ವಿಶ್ವನೀಡಂ-ಅಂಚೆ
ಬೆಂಗಳೂರು - ೫೬೦ ೦೯೧
ಮೊಬೈಲ್: ೭೮೨೯೪೦೪೦೬೩
E-mail: itihasadarpana@gmail.com

**Itihasa Darpana**
(Kannada Quarterly)

**Book 44-45**

January-June 2020
(Combind Issue)

**Editor, ITIHASA DARPANA**
# 33/A, Near ITI College
Kempegowdanagar, Vishwaneedam (P)
Bengaluru - 560 091. Mob: 78294 04063
Website: itihasadarpana.com

**ITIHASA DARPANA** (Quarterly)
A Peer Reviewed Journal of Historical Research in Kannada
ISSN 2321-3590
Book No.: 44-45
January – June 2020
**Authors:** Nagendra Rao
**Title:** Surendra Rao: ondu avalōkana

# ಸುರೇಂದ್ರರಾವ್: ಒಂದು ಅವಲೋಕನ

**ನಾಗೇಂದ್ರ ರಾವ್**
ಗೋವಾ ವಿಶ್ವವಿದ್ಯಾನಿಲಯ


**ಮಂ**ಗಳೂರು ವಿಶ್ವ ವಿದ್ಯಾನಿಲಯದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ಹಲವು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಿದ ಸುರೇಂದ್ರ ರಾವ್ ಈಗ ನಮ್ಮ ಜೊತೆ ಇಲ್ಲ. ಅವರು ಬರೆದದ್ದು ಕಡಿಮೆ, ಹೇಳಿದ್ದು ಹೆಚ್ಚು. ಅವರು ನೀಡಿದ ಉಪನ್ಯಾಸಗಳನ್ನು ಸಂಪಾದಿಸಿ ಪ್ರಕಟಿಸಿದರೆ ವಿದ್ಯಾರ್ಥಿ ಸಮುದಾಯಕ್ಕೆ ಬಹಳಷ್ಟು ಪ್ರಯೋಜನ ಆಗಬಹುದು. ಮಾತ್ರವಲ್ಲದೆ ಈ ಮೂಲಕ ಇತಿಹಾಸದ ಗುರುವಿಗೆ ನಾವು ಮಾಡುವ ನಮನ.

ಸುರೇಂದ್ರ ರಾವ್ ಅವರು ಇತಿಹಾಸದ ಬರಹದಲ್ಲಿ ಕೈಯಾಡಿಸಿದ ಕ್ಷೇತ್ರಗಳು ಹಲವು – ಇತಿಹಾಸ ಸಂಶೋಧನಾ ವಿಧಾನ, ಆಧುನಿಕ ಭಾರತ, ಕೊಡಗಿನ ಇತಿಹಾಸ ಮತ್ತು ತುಳುನಾಡಿನ ಇತಿಹಾಸ ಹಾಗೂ ಸಂಸ್ಕೃತಿ. ಅವರ ಲೇಖನ ಹಾಗೂ ಗ್ರಂಥಗಳನ್ನು ಓದಿದರೆ ಇತಿಹಾಸವನ್ನು ಯಾವ ರೀತಿ ನೋಡಬೇಕು ಎನ್ನುವುದು ತಿಳಿಯುತ್ತದೆ. ಇತಿಹಾಸಕಾರ ಮಾಡಬೇಕಾದ ಕೆಲಸವೆಂದರೆ ತನ್ನ ಕ್ಷೇತ್ರದಲ್ಲಿ ಯಾರು ಯಾವ ರೀತಿಯಲ್ಲಿ ಇತಿಹಾಸ

ರಚಿಸಿದ್ದಾರೆ ಎನ್ನುವುದನ್ನು ತಿಳಿಯುವುದು. ಇತಿಹಾಸಕಾರನಿಗೆ ಪ್ರಾಥಮಿಕ ಆಕರಗಳ ಜೊತೆಗೆ ದ್ವಿತೀಯ ಅಥವಾ ಪ್ರಾಥಮಿಕವಲ್ಲದ ಆಕರಗಳು ಪ್ರಾಮುಖ್ಯವಾಗುತ್ತವೆ. ಎರಡನೆಯದಾಗಿ ಇತಿಹಾಸಕಾರ ಯಾವ ರೀತಿ ನೋಡುತ್ತಾನೆ ಎನ್ನುವುದು ಮುಖ್ಯವಾಗುತ್ತದೆ. ಇತಿಹಾಸವೆಂದರೆ ಕೇವಲ ರಾಜಕೀಯ ಇತಿಹಾಸವಲ್ಲ, ಅದು ಸಾಮಾಜಿಕ ಹಾಗೂ ಸಾಂಸ್ಕೃತಿಕ ಇತಿಹಾಸವನ್ನು ಒಳಗೊಂಡಿದೆ. ಅದು ಒಂದೇ ಸಂಸ್ಕೃತಿಯ ಇತಿಹಾಸಕ್ಕೆ ಸೀಮಿತವಾಗದೆ ವಿವಿಧ ಸಂಸ್ಕೃತಿಗಳ ಪರಿಶೀಲನೆಯನ್ನು ಒಳಗೊಂಡಿದೆ. ಆದ್ದರಿಂದ ರಾವ್ ಹೇಳುವಂತೆ ಸಾಹಿತ್ಯವನ್ನು "ಮಾರ್ಗ" ಹಾಗೂ "ದೇಸಿ" ಎನ್ನುವ ವಿಭಾಗಗಳನ್ನು ವಿದ್ವಾಂಸರು ಮಾಡಿದ್ದಾರೆ. ಆದರೆ ಮಾರ್ಗ ಸಾಹಿತ್ಯದಲ್ಲಿ ನಮಗೆ ದೊರಕುವುದು ದೊರೆಗಳ ಇತಿಹಾಸ. ಜನರ ನಿಜವಾದ ಇತಿಹಾಸ ದೊರೆಯುವುದು ದೇಸಿ ಸಾಹಿತ್ಯದಲ್ಲಿ. ಹೀಗೆಂದು ರಾವ್ ಅಭಿಪ್ರಾಯ ಪಟ್ಟಿದ್ದಾರೆ. ಉದಾಹರಣೆಗೆ ಜನಪದ ಸಾಹಿತ್ಯದಲ್ಲಿ ನಮಗೆ ಸಾಮಾಜಿಕ ಇತಿಹಾಸಕ್ಕೆ ಸಂಬಂಧಪಟ್ಟ ಆಕರಗಳು ದೊರೆಯುತ್ತವೆ. ಹಾಗೆಂದು ಮಾರ್ಗವನ್ನು ನಾವು ಮರೆಯುವ ಅಗತ್ಯವಿಲ್ಲ.

ಇತಿಹಾಸ ಪುನಾರಚನೆ ಕುರಿತು ಸುರೇಂದ್ರ ರಾವ್ ಅವರಿಗೆ ಯಾವುದೇ ವಿರೋಧವಿಲ್ಲ. ಪ್ರತಿಯೊಂದು ಕಾಲದಲ್ಲಿ ಇತಿಹಾಸ ಪುನಾರಚನೆ ನಡೆಯುತ್ತದೆ. ಅದು ಹೊಸ ವಿಷಯ ಅಲ್ಲ. ಆದರೆ ಅದರ ಅರ್ಥ ನಮ್ಮ ಪೂರ್ವ ಚರಿತ್ರೆಯನ್ನು, ಕೆಲವು ಕೋಮುಗಳನ್ನು, ವ್ಯಕ್ತಿಗಳನ್ನು ಮರೆಯಬೇಕು ಎಂದಲ್ಲ. ಹಿಂದೆ ಯಾವುದೇ ಇತಿಹಾಸಕಾರ ಈ ವರ್ತನೆಯನ್ನು ತೋರಿಸಿದಲ್ಲಿ ಈಗ ಅದನ್ನು ಅನುಸರಿಸುವ ಅಗತ್ಯವಿಲ್ಲ. ಈ ರೀತಿಯಲ್ಲಿ ಇಂದಿನ ಇತಿಹಾಸ ರಚನೆಯ ಕುರಿತು ರಾಯರು ವಿಮರ್ಶಿಸಿದ್ದಾರೆ.

ಅವರ ಇತಿಹಾಸ ಬರವಣಿಗೆಯಲ್ಲಿ ಇತಿಹಾಸ ವ್ಯಾಖ್ಯೆಯ ಕುರಿತು ಉಲ್ಲೇಖ ದೊರೆಯುತ್ತದೆ. ರಾವ್ ಅವರು ಇತಿಹಾಸದ ಉದ್ದೇಶವನ್ನು ವಿವರಿಸುತ್ತಾರೆ ಹಾಗೂ ಅವರ ಪ್ರಕಾರ ಇತಿಹಾಸ ಬರೆಯುವುದು ನಮ್ಮ ಸ್ವ ಸಂತೋಷಕ್ಕಾಗಿ ಅಲ್ಲ. ಅದರ ಉದ್ದೇಶ ನಮ್ಮ ಹಿಂದಿನ ಸಮಾಜ ಯಾವ ರೀತಿ ಇತ್ತು ಮತ್ತು ವಿವಿಧ ಸಂಸ್ಕೃತಿಗಳು ಯಾವ ರೀತಿ ಬೇರೆ ಸಂಸ್ಕೃತಿಗಳ ಜೊತೆಗೆ ಹೊಂದಾಣಿಕೆ ಅಥವಾ ಹೋರಾಟವನ್ನು ಮಾಡಿದ್ದವು ಎನ್ನುವುದನ್ನು ತಿಳಿಯುವುದಾಗಿದೆ. ಇತಿಹಾಸದ ಉದ್ದೇಶ ಯಾವುದೇ ವ್ಯಕ್ತಿ, ಭಾಷೆ, ಜಾತಿ ಅಥವಾ ಜನಾಂಗವನ್ನು ವೈಭವೀಕರಿಸುವುದಲ್ಲ. ಅದೇ ರೀತಿಯಲ್ಲಿ ಯಾರನ್ನು ಕೂಡ ತುಚ್ಚೀಕರಣ ಮಾಡುವುದು ಕೂಡ ಇತಿಹಾಸ ಅಲ್ಲ. ಈ ರೀತಿಯಲ್ಲಿ ರಾವ್ ಅವರು ಭವಿಷ್ಯದ ಇತಿಹಾಸಕಾರನಿಗೆ ಇತಿಹಾಸ ರಚನೆಯ ಕುರಿತು ಮಾರ್ಗದರ್ಶನ ನೀಡಿದ್ದಾರೆ. ಅದರಂತೆ ಒಂದು ಇತಿಹಾಸದ ಬದಲು ವಿವಿಧ ಇತಿಹಾಸಗಳನ್ನು ನಾವು ಒಪ್ಪಬೇಕಾಗುತ್ತದೆ. ಆದರೆ ಯಾವುದೇ ಇತಿಹಾಸ ಆಕರಗಳ ಆಧಾರದಲ್ಲಿ ಬರೆಯಬೇಕಾದ್ದು ಬಹಳ ಮುಖ್ಯವಾದ ಅಂಶ. ಇದರ ಅರ್ಥವೆಂದರೆ ರಾವ್ ಅವರು ಒಂದು ಸಿದ್ಧಾಂತವನ್ನು ನಂಬಿದರೂ ಬೇರೆ ಸಿದ್ಧಾಂತವನ್ನು ಪರಿಶೀಲಿಸಲು ಅವರಿಗೆ ಯಾವುದೇ ಅಭ್ಯಂತರವಿರಲಿಲ್ಲ.



ತುಳು ಇತಿಹಾಸದ ಬಗ್ಗೆ ವಿಶೇಷ ಪ್ರೀತಿಯನ್ನು ತೋರಿಸಿರುವ ಸುರೇಂದ್ರ ರಾವ್ Bunts in History and Culture ಎಂಬ ಗ್ರಂಥ ರಚಿಸಿದ್ದಾರೆ. ಅಂದರೆ ಇದು ಬಂಟರ ಇತಿಹಾಸವಲ್ಲ, ಆದರೆ ಇತಿಹಾಸ ಮತ್ತು ಸಂಸ್ಕೃತಿಯಲ್ಲಿ ಬಂಟರ ಪಾತ್ರವನ್ನು ತಿಳಿಯುವ ಪ್ರಾಮಾಣಿಕ ಪ್ರಯತ್ನವಾಗಿದೆ. ಈ ಪುಸ್ತಕದ ಉದ್ದೇಶ ಯಾವುದೇ ಜಾತಿ ಸಮುದಾಯವನ್ನು ವೈಭವೀಕರಿಸುವುದಲ್ಲ. ಇಲ್ಲಿ ಬಂಟರ ಇತಿಹಾಸವನ್ನು ಸರಿಯಾದ ರೀತಿಯಲ್ಲಿ ಅಧ್ಯಯನ ಮಾಡುವುದಾಗಿದೆ. ಕುತೂಹಲಕಾರಿ ವಿಷಯವೆಂದರೆ ರಾವ್ ಅವರು ಆಧುನಿಕ ಕಾಲದ ಬಗ್ಗೆ ಬರೆದಿದ್ದರೂ, ಪುರಾತನ ಮತ್ತು ಮಧ್ಯಕಾಲೀನ ವಿಷಯ ವಸ್ತುವನ್ನು ಶಾಸನ, ಕಡತಗಳು ಇತ್ಯಾದಿ ಆಧಾರಗಳಿಂದಾಗಿ ಅಧ್ಯಯನ ನಡೆಸುವ ಪ್ರಯತ್ನ ಮಾಡಿದ್ದಾರೆ. ಜೊತೆಗೆ ಬೇರೆ ಆಕರಗಳಾದ 'ಭೂತಾಳಪಾಂಡ್ಯನ ಅಳಿಯಕಟ್ಟು ಅಥವಾ ಅಳಿಯ ಸಂತಾನ' ಇತ್ಯಾದಿ ಗ್ರಂಥಗಳ ಆಧಾರದ ಮೇಲೆ ಬಂಟರ ಇತಿಹಾಸವನ್ನು ಪುನಾರಚಿಸುವಲ್ಲಿ ಪ್ರಯತ್ನ ಮಾಡಿದ್ದಾರೆ. ಜನಪದ ಸಾಹಿತ್ಯ ಕೂಡ ಉತ್ತಮ ಆಕರವಾಗಿದೆ ಎಂದು ತಿಳಿಸಿದ್ದಾರೆ. ಶಾಸನಗಳು ಬಂಟರು ಯಾವ ರೀತಿ ಸಮಾಜದ ಅತ್ಯುನ್ನತ ಸ್ತರಕ್ಕೆ ಏರಿರುವ ಕುರಿತು ಸುಳಿವು ಕೊಟ್ಟಿದ್ದಾವೆ.

ಅಳಿಯ ಸಂತಾನ ಪದ್ಧತಿ ಇರುವುದು ತುಳುನಾಡಿನಲ್ಲಿ ಹಾಗೂ ಕೇರಳದಲ್ಲಿ. ಈ ಎರಡು ಪ್ರದೇಶಗಳ ಸಾಮ್ಯತೆಯನ್ನು ರಾವ್ ಅವರು ಗುರುತಿಸಿದ್ದಾರೆ. ಅಳಿಯ ಸಂತಾನ ಪದ್ಧತಿಯಲ್ಲಿ ಮಹಿಳೆಯರು ಭೂ ಮಾಲೀಕರಿದ್ದಾರೆ ಎನ್ನುವ ಮಾಹಿತಿ ನಮಗೆ ತಿಳಿದೇ ಇದೆ. ಶಾಸನಗಳಲ್ಲಿ ಅವರು ಬ್ರಾಹ್ಮಣರಿಗೆ, ದೇವಸ್ಥಾನಗಳಿಗೆ ಮತ್ತು ಬಸದಿಗಳಿಗೆ ದಾನ ನೀಡಿರುವ ಕುರಿತು ಉಲ್ಲೇಖ ದೊರೆಯುತ್ತದೆ. ಆದರೂ ಕೂಡ, ಕೆಲವು ಶಾಸನಗಳ ಆಧಾರದಲ್ಲಿ ನಾವು ಪುರುಷರ ಮತ್ತು ಮಹಿಳೆಯರ ನಡುವೆ ಸಮಾನತೆ ಇದೆ ಎಂದು ಹೇಳಲು ಆಗುವುದಿಲ್ಲ ಎಂದು ಸುರೇಂದ್ರ ರಾಯರು

ಅಭಿಪ್ರಾಯ ಪಡುತ್ತಾರೆ. ಅದೇ ರೀತಿಯಲ್ಲಿ ಇತಿಹಾಸ ಆಕರಗಳು ಯಾವ ರೀತಿಯಲ್ಲಿ ಇತಿಹಾಸಕಾರನ ದಿಕ್ಕು ತಪ್ಪಿಸಬಹುದು ಎಂದು ನಾವು ತಿಳಿಯಬಹುದು. ಅದೂ ಅಲ್ಲದೆ ಭೂತಾಳಪಾಂಡ್ಯನ ಪುಸ್ತಕವನ್ನು ಐತಿಹಾಸಿಕ ಗ್ರಂಥವೆನ್ನಲು ಸಾಧ್ಯವಿಲ್ಲ. ಇದು ಯಾಕೆಂದರೆ ಈ ಗ್ರಂಥದ ರಚನೆ ಆದದ್ದು ಇತ್ತೀಚೆಗೆ ಅಂದರೆ 19ನೇ ಶತಮಾನದ ಕೊನೆ ದಶಕಗಳಲ್ಲಿ. ಈ ಕಾರಣದಿಂದ ಈ ಆಕರವನ್ನು ನಂಬಿ ಬರೆದ ಗ್ರಂಥಕ್ಕೆ ಬಹಳ ಮಾನ್ಯತೆ ದೊರೆಯುವುದಿಲ್ಲ.

ಬಂಟ ಎನ್ನುವ ಶಬ್ದದ ಉಲ್ಲೇಖ ಕುರಿತು ರಾವ್ ಅವರು ಸಂಶೋಧನೆ ಮಾಡಿದ್ದಾರೆ. ಐತೊಹಾಸಿಕ ಕಾಲದಲ್ಲಿ ಬಂಟರು ಎನ್ನುವ ಶಬ್ದ ಸಿಗುವುದು ಕಡಿಮೆ. ಬಂಟ ಎನ್ನುವ ಪದವನ್ನು ಸೈನಿಕ ಅಥವಾ ಯೋಧ ಎನ್ನುವ ಅರ್ಥದಲ್ಲಿ ಉಪಯೋಗ ಮಾಡಲಾಗಿದೆ. ಶೆಟ್ಟಿ ಅಥವಾ ಸೆಟ್ಟಿ ಎನ್ನುವ ಶಬ್ದಗಳನ್ನು ನಾವು ಹೆಚ್ಚಾಗಿ ಕಾಣುತ್ತೇವೆ. ಅಂದರೆ ಬಂಟರು ವ್ಯವಸಾಯ ಮಾಡಿದ್ದರು ಕೂಡ, ಕಾಲ ಕ್ರಮೇಣ ವ್ಯಾಪಾರಿಯಾಗಿ ಕೂಡ ಕಾಣಿಸುತ್ತಾರೆ. ಈ ರೀತಿಯಲ್ಲಿ ಬಂಟರ ಸಾಮಾಜಿಕ ಹಾಗೂ ಆರ್ಥಿಕ ಬದಲಾವಣೆಯನ್ನು ಕಾಣಬಹುದು. ಅಳುಪ, ವಿಜಯನಗರ ಹಾಗೂ ಕೆಳದಿ ಸಾಮ್ರಾಜ್ಯಗಳಲ್ಲಿ ಬಂಟರ ಕಾರ್ಯ ಚಟುವಟಿಕೆಯನ್ನು ನಾವು ಕಾಣಬಹುದು. ಸುರೇಂದ್ರ ರಾಯರು ಇಂದು ನಮ್ಮೊಡನೆ ಇದ್ದಿದ್ದರೆ, ಪ್ರಾಯಶಃ ತುಳುನಾಡಿನ ವಿಷಯವಾಗಿ ಇನ್ನಷ್ಟು ಅಧ್ಯಯನ ಮಾಡುತ್ತಿದ್ದರು.

ಆಧುನಿಕ ಭಾರತದ ಕುರಿತು, ಅದರಲ್ಲೂ ವಸಾಹತುಶಾಹಿ ಆಡಳಿತದ ಬಗ್ಗೆ ರಾವ್ ಅವರು ಬರೆದಿದ್ದಾರೆ. ಭಾರತವನ್ನು ಬ್ರಿಟಿಷರು ಯಾವ ರೀತಿ ವಸಾಹತು ಆಗಿ ಪರಿವರ್ತನೆ ಮಾಡಿದರು ಎನ್ನುವ ಕುರಿತು ಬರೆದಿದ್ದಾರೆ. ಇದು ಎರಡು ರೀತಿಯಲ್ಲಿ ನಡೆದಿದೆ. ಒಂದು, ಶಕ್ತಿಯ ಮೂಲಕ. ಎರಡನೆಯದು, ಯುಕ್ತಿಯ ಮೂಲಕ. ಆದರೆ ಶಕ್ತಿಯ ಮೂಲಕ ಅಂದರೆ ಸೈನ್ಯದ ಸಹಾಯದಿಂದ ಬಹಳಷ್ಟು ಸಮಯ ಯಾವುದೇ ದೇಶವನ್ನು ಬಂಧನದಲ್ಲಿ ಇರಿಸುವುದು ಕಠಿಣ ಆಗುತ್ತದೆ. ವಸಾಹತುಶಾಹಿ ಬಹಳ ಸಾಧಾರಣವಾದ ಬೆಳವಣಿಗೆ ಅಲ್ಲ. ಅದರ ಸಂಕೀರ್ಣತೆಯನ್ನು ಅರ್ಥ ಮಾಡಿಕೊಳ್ಳುವುದು ಬಹಳ ಮುಖ್ಯವಾಗುತ್ತದೆ. ಇದೇ ಪ್ರಯತ್ನದಲ್ಲಿ ರಾವ್ ಅವರು ಹೇಳುವಂತೆ ವಸಾಹತುಶಾಹಿ ಬಂಡವಾಳಶಾಹಿಯ ಜಾಗತೀಕರಣದ ಒಂದು ಪ್ರಕ್ರಿಯೆ. ಈ ಪ್ರಕ್ರಿಯೆಯ ಮೂಲಕ ಆಧುನಿಕತೆಯನ್ನು ಪ್ರಾಂತೀಯ ಅಧಿಕಾರಿಗಳಿಗೆ ತಿಳಿಸಲಾಗಿದೆ. ರಾವ್ ಅವರ ಪ್ರಕಾರ ಆಧುನಿಕ ವಿಚಾರಗಳಾದ ವಿಜ್ಞಾನ ಮತ್ತು ಬೆಳವಣಿಗೆಯ ಮೂಲಕ ವಸಾಹತುಶಾಹಿಗಳು ಭಾರತೀಯರಿಗೆ ಹೊಸ ಪ್ರಪಂಚವನ್ನು ತೋರಿಸಿದರು. ಅಂದರೆ ಅವರ ಪ್ರಕಾರ ಭಾರತವನ್ನು ಬ್ರಿಟಿಷರು ಸೋಲಿಸಿದ್ದು ಜ್ಞಾನದಿಂದಾಗಿ ಹಾಗೂ ಜ್ಞಾನದ ಮೂಲಕ. ಭಾರತೀಯರ ಮನಸ್ಸನ್ನು ಗೆದ್ದ ಬ್ರಿಟಿಷರು ಭಾರತವನ್ನು ಯೂರೋಪಿಕರಣಗೊಳಿಸಲಿಲ್ಲ. ಅಂದರೆ ಅದರ ಅಗತ್ಯ ಬೀಳಲಿಲ್ಲ. ಈ ರೀತಿಯಲ್ಲೆ ವಸಾಹತುಶಾಹಿಯ ಕಾರ್ಯತಂತ್ರಗಳನ್ನು ಓದುಗರ ಮುಂದೆ ತೆರೆದಿಟ್ಟಿದ್ದಾರೆ. ಇಂತಹ ಸೈದ್ಧಾಂತಿಕ ಚೌಕಟ್ಟು ಇಂದಿನ ಹಾಗೂ ಮುಂದಿನ ಇತಿಹಾಸಕಾರರಿಗೆ ಮಾರ್ಗದರ್ಶನವನ್ನು ನೀಡುತ್ತದೆ.

ಈ ಮೇಲಿನ ಸೈದ್ಧಾಂತಿಕ ಚೌಕಟ್ಟಿನ ಆಧಾರದಲ್ಲಿ ಕೊಡಗಿನ ಇತಿಹಾಸವನ್ನು ವಿಮರ್ಶಿಸಲು ರಾವ್ ಅವರು ಪ್ರಯತ್ನಿಸಿದ್ದಾರೆ. ಭಾರತದ ವಸಾಹತುಶಾಹಿ ಅಧ್ಯಾಯದಲ್ಲಿ ಬ್ರಿಟಿಷರು ಕೊಡಗಿನ ವಿಷಯದಲ್ಲಿ ತೋರಿದ ಧೋರಣೆ ರಾವ್ ಅವರಿಗೆ ಮುಖ್ಯವಾಗುತ್ತದೆ. ಈ ಮೂಲಕ ಕೊಡಗನ್ನು ಬ್ರಿಟಿಷರು ಯಾವ ರೀತಿ ತಮ್ಮ ಹತೋಟಿಯಲ್ಲಿ ಇಟ್ಟುಕೊಳ್ಳಲು ಪ್ರಯತ್ನಿಸಿದರು ಎಂಬುದನ್ನು ತೋರಿಸಿದ್ದಾರೆ. ಬ್ರಿಟಿಷರ ಪ್ರಕಾರ ಕೊಡಗು ತನ್ನದೇ ಆದ ವಿಶೇಷತೆಯನ್ನು ಹೊಂದಿದೆ. ಈ ವಾದದ ಮೂಲಕ ಅವರು ಕೊಡಗಿನ ಭೂಮಾಲೀಕರು ಹಾಗೂ ಉನ್ನತ ವರ್ಗದ ವ್ಯಕ್ತಿಗಳನ್ನು ವಸಾಹತುಶಾಹಿ ಆಡಳಿತವನ್ನು ಒಪ್ಪಿಕೊಳ್ಳುವಂತೆ ಮಾಡುತ್ತಾರೆ. ಇದನ್ನು ಒಪ್ಪಿಕೊಂಡ ಕೆಲವು ಕೊಡಗಿನವರು ತಾವು ಕರ್ನಾಟಕದ ಬೇರೆ ಪ್ರದೇಶಗಳಿಗಿಂತ ಭಿನ್ನ ಆಗಿದ್ದೇವೆ. ಅವರ ಪ್ರಕಾರ ಕೊಡಗಿನವರು ತಮ್ಮ ಪ್ರದೇಶಕ್ಕೆ ಆಹ್ವಾನಿಸಿದ್ದಾರೆ. ಅಂದರೆ ಕೊಡಗನ್ನು ಬ್ರಿಟಿಷರು ಯುದ್ಧದ ಮೂಲಕ ವಶಪಡಿಸಿಕೊಳ್ಳಲಿಲ್ಲ. ಇದೇ ವಾದವನ್ನು ಮುಂದುವರಿಸಿ ತಮ್ಮ ಪ್ರದೇಶವನ್ನು ಕರ್ನಾಟಕ ಅಥವಾ ದಕ್ಷಿಣ ಭಾರತದ ಯಾವುದೇ ಪ್ರದೇಶದ ಜೊತೆ ವಿಲೀನ ಮಾಡಬಾರದೆಂದು ವಿನಂತಿಸಿಕೊಂಡರು. ಸುರೇಂದ್ರ ರಾವ್ ಅವರ ಪ್ರಕಾರ ಕೊಡಗನ್ನು ಈ ರೀತಿ ಪ್ರೋತ್ಸಾಹ ಮಾಡಿದ್ದರಿಂದ ಕೊಡಗು ರಾಷ್ಟ್ರೀಯತೆಯ ಗಾಳಿ ತಪ್ಪಿಸಿಕೊಳ್ಳಲು ಸಾಧ್ಯವಾಯಿತು. ಇದರಿಂದ ಪ್ರಭಾವಿತರಾದ ಕೊಡಗಿನ ನಾಯಕರು ತಾವು ಎರಡನೇ ಮಾಹಾಯುದ್ಧದಲ್ಲಿ ಬ್ರಿಟಿಷರ ಪರವಾಗಿ ಹೋರಾಟ ಮಾಡುತ್ತೇವೆ ಎಂದು ನಿರ್ಧರಿಸಿದರು. ಆದರೆ ಕೊಡಗಿನ ಬೇರೆ ತುಕಡಿ ಮಾಡಬೇಕೆಂದು ಕೋರಿದರು. ಕೊಡಗಿನ ಗುರುತಿಸುವಿಕೆಯಿಂದಾಗಿ ಬ್ರಿಟಿಷರು ಕೊಡಗಿನ ನಾಯಕರ ಜೊತೆಗೆ ಒಳ್ಳೆಯ ಸಂಬಂಧವನ್ನು ಬೆಳೆಸಿದರು. ಇದು ಅವರಿಗೆ ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ನೆರವಾಗುತ್ತದೆ. ಈ ವಿಶ್ಲೇಷಣೆ ಕೊಡಗಿಗೆ ಮಾತ್ರ ಸೀಮಿತವಾಗದೆ ಬೇರೆ ಪ್ರದೇಶಗಳಿಗೆ ಕೂಡ ಪ್ರಸ್ತುತವಾಗುತ್ತದೆ. ಭಾರತದ ಪ್ರತಿಯೊಂದು ಪ್ರದೇಶ ತನ್ನದೇ ಆದ ವಿಶೇಷತೆಯನ್ನು ಒಳಗೊಂಡಿದೆ. ಇದನ್ನು ಉಪಯೋಗಿಸಿ ಬ್ರಿಟಿಷರು ನೀವು ಉಳಿದವರಿಗಿಂತ ಭಿನ್ನ ಎಂದು ಹೇಳಿ ಅವರ ಸಹಕಾರವನ್ನು ಪಡೆದಿದ್ದಾರೆ.

ಇದೇ ಕಾರ್ಯತಂತ್ರವನ್ನು ಪೋರ್ಚುಗೀಸರು ಗೋವದಲ್ಲಿ ಅಳವಡಿಸಿದನ್ನು ಕಾಣಬಹುದು. ಪೋರ್ಚುಗೀಸರ ಆಡಳಿತದಿಂದ ಗೋವ ತನ್ನದೇ ಆದ ವಿಶೇಷತೆಯನ್ನು ಪಡೆದಿವೆ. ಈ ಕಾರಣದಿಂದ ಕೆಲವು ಗೋವಾದ ನಾಯಕರು ಪೋರ್ಚುಗೀಸರ ಸಮರ್ಥನೆಯನ್ನೂ ಈಗಲೂ ಮಾಡುವುದನ್ನು ಕಾಣಬಹುದು.

ಇತಿಹಾಸದ ವಿವಿಧ ಕ್ಷೇತ್ರಗಳನ್ನು ಅಧ್ಯಯನ ಮಾಡಿರುವ ಸುರೇಂದ್ರ ರಾಯರು ಇತಿಹಾಸಕಾರರಿಗೆ ಯಾವ ರೀತಿ ಆಕರಗಳನ್ನು ಅಧ್ಯಯನ ಮಾಡಬೇಕೆಂದು ತಿಳಿಸಿದ್ದಾರೆ. ವಿವಿಧ ಪಂಡಿತರು ಇತಿಹಾಸ ರಚನೆಯ ಕುರಿತು ಹೇಳಿದ್ದನ್ನು ತೀಕ್ಷ್ಣವಾಗಿ ವಿಶ್ಲೇಷಣೆ ಮಾಡಿ ತಮ್ಮ ವಿದ್ಯಾರ್ಥಿಗಳಿಗೆ ತಿಳಿಸಿದರು. ಈ ಕಾರಣದಿಂದ ಇತಿಹಾಸ ರಚನೆಗಿಂತ ರಚನೆಯ ಪ್ರಕ್ರಿಯೆ ಮುಖ್ಯವಾಗುತ್ತದೆ. ರಾವ್ ಅವರು ವಿವಿಧ ಪರಿಕಲ್ಪನೆಗಳ ಕುರಿತು ತಿಳಿಸಿದ್ದಾರೆ. ಅಷ್ಟು ಮಾತ್ರವಲ್ಲದೇ ಈ ಪರಿಕಲ್ಪನೆಗಳನ್ನು

ಯಾವ ರೀತಿ ಇತಿಹಾಸ ರಚನೆ ಮಾಡುವಾಗ ಉಪಯೋಗ ಮಾಡಬೇಕೆಂದು ತಿಳಿಸಿದ್ದಾರೆ. ಆಧೂನಿಕ ಭಾರತ, ಐತಿಹಾಸಿಕ ಸಂಶೋಧನಾ ಶಾಸ್ತ್ರ, ತುಳುನಾಡಿನ ಇತಿಹಾಸ ಹಾಗೂ ಕೊಡಗಿನ ಇತಿಹಾಸಗಳಿಗೆ ರಾವ್ ಅವರು ನೀಡಿದ ಕೊಡುಗೆ ಶ್ಲಾಘನೀಯ. ಅವರು ನೀಡಿದ ಪರಿಕಲ್ಪನೆಗಳನ್ನು ಉಪಯೋಗಿಸಿದಲ್ಲಿ ಉತ್ತಮವಾದ ಇತಿಹಾಸ ಕೃತಿಯನ್ನು ರಚಿಸಲು ಸಾಧ್ಯವಾಗುತ್ತದೆ.

## ಆಕರಗಳು


B. Surendra Rao., "The Monitored insularity of Coorg" (1924-1947), **proceedings of the Indian History Congress,** vol 52, 1991, 528-533.

-------------------, "The 'Modern' in Modern Indian History", **proceedings of the Indian History Congress,** vol 61, Part 1, Millenium 2000-2001, 566-594.

-------------------, **Bunts in History and Culture,** Rastrakavi Govinda Pai Research Center, Udupi, 2010.

————————, "ಆರ್.ಎಸ್.ಶರ್ಮ (೧೯೨೦–೨೦೧೧)", ಚರಿತ್ರೆ ಅಧ್ಯಯನ, ಸಂಪುಟ –೬, ಸಂಚಿಕೆ ೧–೨, ೨೦೧೦–೨೦೧೧, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧–೧೪.

-------------------, "Images of Trade and Traders in Tulu Folklore", **Studies in people's History, Volume : 2,** issue: 1, 2015, 41-53.

————————, "ನಮ್ಮ ಸಾಂಸ್ಕೃತಿಕ ಇತಿಹಾಸವನ್ನು ಗ್ರಹಿಸುವುದು ಹೇಗೆ?" **ಇತಿಹಾಸ ದರ್ಪಣ, ಪುಸ್ತಕ ೪೦–೪೧,** ಜನವರಿ–ಜೂನ್ ೨೦೧೯, ೧೩–೨೮.